**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 721/2024**

**ಚಾ.ಸಾ.** 7

**ಪ್ರಾ.ಸಾ.** 5

**ದಿನಾಂಕಃ19.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ದಶರಥ ಹೆಮ್ಮಟ್ಟಿ |
| ತಂದೆಃ ಗಂಡನ ಹೆಸರು | ಜಿನ್ನಪ್ಪ |
| ಉದ್ಯೋಗ | ವ್ಯವಸಾಯ |
| ವಯಸ್ಸು | 59 |
| ವಾಸಸ್ಥಳ | ಬಿ. ಗುಡಿಹಾಳ |

**ಪ್ರಾರಂಭ ಸಮಯಃ 05.15. ಪಿ ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಮೃತ ಚಂದ್ರವ್ವ ಗೊತ್ತು. ಪ್ರಾಸಾ1 ರಿಂದ 4 ಮತ್ತು ಚಾಸಾ 8 ರಿಂದ 11 ನನಗೆ ಗೊತ್ತು. ಆಪಾದಿತ ಗೊತ್ತು.

ಸುಮಾರು 2 ವರ್ಷಗಳ ಹಿಂದೆ ಆದಂತಹ ರಸ್ತೆಯ ಅಪಘಾತದಲ್ಲಿ ಪ್ರಾಸಾ1 ರವರ ಪತ್ನಿ ಮರಣ ಹೊಂದಿರುತ್ತಾಳೆ. ಅಪಘಾತವು ಕಲಘಟಗಿ-ಹುಲಕೊಪ್ಪ ರಸ್ತೆಯ ಮೇಲೆ ಆಗಿರುತ್ತದೆ. ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ. ಅಪಘಾತದ ಸ್ಥಳದಲ್ಲಿ ನಾನು ಸದರಿ ಸ್ಥಳದಲ್ಲಿ ಇದ್ದು ನೆರೆದಂತಹ ಜನರನ್ನು ನೋಡಿ ನಾನು ಘಟನಾ ಸ್ಥಳಕ್ಕೆ ಹೋದೆ. ಖಾಸಗಿ ವಾಹನದಲ್ಲಿ ಪ್ರಾಸಾ1 ಮತ್ತು ಆತನ ಮಕ್ಕಳು ಸೇರಿ ಪ್ರಾಸಾ1 ರವರ ಪತ್ನಿಯನ್ನು ಹುಬ್ಬಳ್ಳಿಯ ಶಕುಂತಲಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಅಪಘಾತಪಡಿಸಿದ ವಾಹನ ಯಾವುದು ಮತ್ತು ಅಪಘಾತ ಹೇಗೆ ಆಯಿತು ಎಂದು ಗೊತ್ತಿಲ್ಲ. ನಾನು ಪೊಲೀಸ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ ರವರಿಗೆ ಪಾಟೀಸವಾಲು ಮಾಡಲು ಅವಕಾಶ ನೀಡಲಾಯಿತು.**

ದಿಃ01.11.2023 ರಂದು ಬಿ. ಗುಡಿಹಾಳ-ಗಳಗಿ ಹುಲಕೊಪ್ಪ ರಸ್ತೆಯ ಮೇಲೆ ಪ್ರಾಸಾ1 ರವರ ಜಮೀನಿನ ಹತ್ತಿರ ಸಂಜೆ 4.00 ಗಂಟೆ ಸಮಯದಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ನಾನು ನನ್ನ ಹೊಲದಲ್ಲಿ ಇದ್ದೆವು ಎಂದರೆ ಸರಿ. ಆಪಾದಿತನು ತನ್ನ ಹೆಸರಿನಲ್ಲಿರುವ ವಾಹನ ಸಂಖ್ಯೆ ಕೆ25-ಇವಿ-7241 ದಲ್ಲಿ ತನ್ನ ತಾಯಿಯನ್ನು ಕುರಿಸಿಕೊಂಡು ಅಜಾಗರೂತೆಯಿಂದ ಚಾಲನೆ ಮಾಡಿ ರಸ್ತೆಯ ಮೇಲೆ ಬೀಳುವಂತೆ ಮಾಡಿದರು ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಜನ ಸೇರಿದ್ದರು ಎಂದರೆ ಸರಿ. ಅದನ್ನು ನೋಡಿ ನಾನು ಸ್ಥಳಕ್ಕೆ ಹೋದೆ ಎಂದರೆ ಸರಿ. ಅಪಘಾತದ ವಿಚಾರವನ್ನು ತಿಳಿದು ಸ್ದಳಕ್ಕೆ ಹೋದೆ ಎಂದರೆ ಸರಿ. ಪ್ರಾಸಾ1 ರವರ ಪತ್ನಿಗೆ ತಲೆಯ ಹಿಂಬದಿ ಭಾರಿ ಗಾಯವಾಗಿತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಅವರನ್ನು ಖಾಸಗಿ ವಾಹನದದಲ್ಲಿ ಆಸ್ಪತ್ರಗೆ ಕರೆದುಕೊಂಡು ಹೋದರು ಎಂದರೆ ಸರಿ. ಆಪಾದಿತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ದಿಃ 03.11.2023 ರಂದು ಪ್ರಾಸಾ1 ರವರ ಪತ್ನಿ ಮರಣ ಹೊಂದಿದ್ದರು ಎಂದರೆ ಸರಿ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಆಯ್ದ ಭಾಗವನ್ನು ನಿಪಿ13 ಎಂದು ಗುರುತಿಸಲಾಯಿತು. ಆಪಾದಿತನು ನಮ್ಮ ಗ್ರಾಮದವನು ಆಗಿರುವುದರಿಂದ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ13 ರಲ್ಲಿರುವ ಎಲ್ಲಾ ಅಂಶಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆಪಾದಿತನ ಪರ ಶ್ರೀ. ಎಮ್ ಬಿ ಡಿ ವಕೀಲರು ಪಾಟೀಸವಾಲು ಇಲ್ಲ ಎಂದು ನುಡಿದರು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**